# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು(ಆರೋಗ್ಯ)ರವರ ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-02.

ಸಂಖ್ಯೆ: ವಿ.ಆ(ಆ)/ /2020-21 ದಿನಾಂಕ: 11. 07.2020

## ಸುತ್ತೋಲೆ

ವಿಷಯ: ಕೋವಿಡ್-19 ರ್‍ಯಾಪಿಡ್ ಆಂಟಿಜೆನ್ ಪರೀಕ್ಷಾ ಕಿಟ್‌ಗಳ ಬಳಕೆ ಮಾಡಿ ಪರೀಕ್ಷೆ ನಡೆಸುವ ಬಗ್ಗೆ ಮಾರ್ಗಸೂಚಿಗಳು.

ಉಲ್ಲೇಖ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಸುತ್ತೋಲೆಯ ಪತ್ರ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/246/ಎಸಿಎಸ್/2020 ದಿನಾಂಕ: 10.07.2020.

*****

ರಾಜ್ಯದಲ್ಲಿ ಕೋವಡ್-19 ಹರಡುತ್ತಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಶಿಷ್ಟಾಚಾರವನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ. ಸೋಂಕನ್ನು ಶೀಘ್ರವಾಗಿ ಪತ್ತೆಹಚ್ಚುವ ಸಲುವಾಗಿ ಪ್ರಸ್ತುತ ಚಾಲ್ತಿಯಲ್ಲಿರುವ ವಿಧಾನವನ್ನು, ನಿರ್ದಿಷ್ಟತೆ ಹಾಗೂ ಸೂಕ್ಷ್ಮತೆ ಹೊಂದಿರುವ ವಿಶ್ವಾಸಾರ್ಹ ಪಾಯಿಂಟ್ ಆಫ್ ಕೇರ್ ರ್‍ಯಾಪಿಡ್ ಆಂಟಿಜೆನ್ ಪರೀಕ್ಷಾ ಮೂಲಕ ವರದಿಸುವ ಅಗತ್ಯವಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿರುವ ಪಾಲಿಕೆ/ಸರ್ಕಾರಿ ಆರೋಗ್ಯ ಘಟಕಗಳಲ್ಲಿರುವ ಪ್ರಯೋಶಾಲೆಗಳಲ್ಲಿ ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆಯ ಬಗ್ಗೆ ಐ.ಸಿ.ಎಂ.ಆರ್ ನೀಡಿರುವ ಸಲಹೆಗಳ ಅನ್ವಯ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1. ಕೋವಿಡ್-19 ಆಂಟಿಜೆನ್ ಪತ್ತೆಹಚ್ಚುವ ಟೆಸ್ಟ್‌ನ ಶಿಫಾರಸ್ಸುಗಳನ್ನು ಅನುಬಂಧ-1ರ ಸರಣಿ ಪಟ್ಟಿಯಲ್ಲಿ (Flow Chart) ತಿಳಿಸಲಾಗಿದೆ.
2. ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆ ಮಾಡುತ್ತಿರುವ ಎಲ್ಲಾ ಆರೋಗ್ಯ ಕೇಂದ್ರಗಳು/ರೆಫರಲ್ ಆಸ್ಪತ್ರೆಗಳು ಖಡ್ಡಾಯವಾಗಿ ಐ.ಸಿ.ಎಂ.ಆರ್‌ನೊಂದಿಗೆ ನೊಂದಣಿ ಮಾಡಿಸಬೇಕು ಹಾಗೂ ಪರೀಕ್ಷೆಗೆ ಒಳಪಟ್ಟ ಪ್ರತಿಯೊಬ್ಬರ ಪಾಸಿಟೀವ್/ನೆಗೆಟೀವ್ ಫಲಿತಾಂಶಗಳನ್ನು ಐ.ಸಿ.ಎಂ.ಆರ್ ಪೋರ್ಟಲ್‌ನಲ್ಲಿ ನಮೂದಿಸಬೇಕು.(ಅನುಬಂಧ-2) ಐ.ಸಿ.ಎಂ.ಆರ್‌ನೊಂದಿಗೆ ನೊಂದಣಿ ಮಾಡಲು ವಿಫಲವಾದ್ದಲ್ಲಿ ಅಥವ ಪರೀಕ್ಷೆಗೆ ಒಳಪಟ್ಟ ಪ್ರತಿ ವ್ಯಕ್ತಿಯ ಫಲಿತಾಂಶವನ್ನು ಅಪ್‌ಲೋಡ್ ಮಾಡಲು ವಿಫಲವಾದ್ದಲ್ಲಿ ಸದರಿ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳ ಮೇಲೆ ಸಾಂಕ್ರಾಮಿಕ ರೋಗಗಳ ಕಾಯ್ದೆಯ ಅನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
3. ಪಾಯಿಂಟ್ ಆಫ್ ಕೇರ್ ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆ ಕುರಿತು ಸಂಕ್ಷಿಪ್ತ ವಿವರಣೆ ಹಾಗೂ ವಿಡಿಯೋ ಲಿಂಕ್‌ನ ಮಾಹಿತ ಅನುಬಂಧ-3ರಲ್ಲಿರುವಂತೆ ಅನುಸರಿಸಬೇಕು.
4. ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆ ನಡೆಸುವಾಗ ಈ ಕೆಳಕಂಡ ವರ್ಗಗಳಿಗೆ ಆದ್ಯತೆ ನೀಡುವುದು.

- ಕಂಟೈನ್‌ಮೆಂಟ್ ವಲಯ ಹಾಗೂ ಫೀವರ್ ಕ್ಲಿನಿಕ್‌ನಲ್ಲಿರುವ ILI ಪ್ರಕರಣಗಳು, SARI ಪ್ರಕರಣಗಳು,
- ಶಂಕಿತ ಕೋವಿಡ್-19ರ ಮರಣ ಪ್ರಕರಣಗಳು,
- ಆರೋಗ್ಯ ಕಾರ್ಯಕರ್ತರು,
- ಅಂತರ ರಾಷ್ಟೀಯ ಪ್ರಯಾಣದ ಹಿನ್ನಲೆಯವರು
- ಸೋಂಕಿತ ಲಕ್ಷಣ ರಹಿತರು,

Scanned with CamScanner

- ಕ್ಯಾನ್ಸರ್‌ನಿಂದ ಬಳಲುತ್ತಿರುವವರು,
- ಕೀಮೋಥೆರಪಿ ಪಡೆಯುತ್ತಿರುವವರು,
- ಹೆಚ್.ಐ.ವಿ ಹಾಗೂ ಇತರೆ ರೋಗ ನಿರ್ಬಂಧಕ ಕಾಯಿಲೆಗಳಿಂದ ಬಳಲುತ್ತಿರುವವರು,
- ಅಂಗಗಳ ಕಸಿ ಪಡೆದವರು,
- ತುರ್ತು ಶಸ್ತ್ರ ಚಿಕಿತ್ಸಾ ವಿಧಾನಗಳಿಗೆ ಒಳಪಟ್ಟಿರುವರು, ಇತ್ಯಾದಿ.

ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆಯನ್ನು ನೀಡುವ ಹಿನ್ನೆಲೆಯಲ್ಲಿ ಕೋವಿಡ್-19 ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆಗಳನ್ನು ಮಾಡಲು ಅವಶ್ಯವಿರುವ ಟೆಸ್ಟ್ ಕಿಟ್‌ಗಳನ್ನು ಹಾಗೂ ಪರೀಕ್ಷಾ ಪರಿಕರಗಳನ್ನು ಕೇಂದ್ರ ಉಗ್ರಾಣದಿಂದ, (ದಾಸಪ್ಪ ಆಸ್ಪತ್ರೆಯ ಆವರಣ) ಪಡೆಯುವುದು, ಉಗ್ರಾಣದಲ್ಲಿ ಲಭ್ಯವಿಲ್ಲದ ಪರಿಕರಗಳನ್ನು ಮುಕ್ತನಿಧಿ ಅನುದಾನದಿಂದ ಖರೀದಿಸಿ ಪರೀಕ್ಷಿಸುವುದು ಹಾಗೂ ಪರೀಕ್ಷಾ ವರದಿಯನ್ನು ಆಗಿಂದ್ದಾಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಲು ಕ್ರಮ ವಹಿಸುವ ಬಗ್ಗೆ ಈ ಮೂಲಕ ಆದೇಶಿಸಲಾಗಿದೆ.

11/7/2020

ವಿಶೇಷ ಆಯುಕ್ತರು(ಆರೋಗ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ

ಪ್ರತಿಯನ್ನು :

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತಶಾಖೆಯ ಮೂಲಕ ಸಲ್ಲಿಸಿದೆ.
2. ಅಭಿಯಾನ ನಿರ್ದೇಶಕರು, ಎನ್.ಹೆಚ್.ಎಂ ರವರ ಅವಗಾಹನೆಗೆ ತರಲು ಆಪ್ತಶಾಖೆಯ ಮೂಲಕ ಸಲ್ಲಿಸಿದೆ.
3. ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ/ಕ್ಲಿನಿಕಲ್), ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.
4. ಡಿ.ಹೆಚ್.ಓ, ಬೆಂಗಳೂರು ನಗರ ಜಿಲ್ಲೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಆರೋಗ್ಯಾಧಿಕಾರಿಗಳು, ಬಿಬಿಎಂಪಿ (ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯ)ರವರ ಮಾಹಿತಿಗಾಗಿ ಕಳುಹಿಸಿದೆ.
6. ಎಲ್ಲಾ ರೆಫರಲ್ ಅಸ್ಪತ್ರೆಯ ಅಧೀಕ್ಷಕರು, ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳಹಿಸಿದೆ.
7. ನಗರ ಯೋಜನಾ ನಿರ್ವಹಣಾಧಿಕಾರಿಗಳು, ಎನ್.ಯು.ಹೆಚ್.ಎಂರವರ ಮಾಹಿತಿಗಾಗಿ ಕಳುಹಿಸಿದೆ.
8. ಎಲ್ಲಾ ನ.ಪ್ರಾ.ಆ.ಕೇಂದ್ರದ ವೈದ್ಯಾಧಿಕಾರಿಗಳು, ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
9. ಸರ್ವೇಕ್ಷಣಾಧಿಕಾರಿ, ಬಿಬಿಎಂಪಿ/ಬೆಂಗಳೂರು ನಗರ ಜಿಲ್ಲೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಎಲ್ಲಾ ವಲಯ ಕಾರ್ಯಕ್ರಮ ವ್ಯವಸ್ಥಾಪಕರು (ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯ)ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಛೇರಿ ಕಡತಕ್ಕೆ.

Scanned with CamScanner